# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,**
**ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗ, ಬಸವೇಶ್ವರ ಲೇಔಟ್, 3ನೇ ಮುಖ್ಯರಸ್ತೆ, ಕೈಲಾಶೇಶ್ವರ ದೇವಸ್ಥಾನ ಹಿಂಭಾಗ ಅತ್ತಿಗುಪ್ಪೆ, ಬೆಂಗಳೂರು-40,**

ಸಂಖ್ಯೆ: ಸ.ಕಾ.ನಿ.ಅ/ಗಾ.ಅ/ಪಿಆರ್/11/21-22 ದಿನಾಂಕ:17-04-2021

## ದಿನಾಂಕ:17-04-2021 ರಂದು ವಾರ್ಡ ಸಂಖ್ಯೆ:132 ಅತ್ತಿಗುಪ್ಪೆ ವಾರ್ಡ ಸಮಿತಿ ಸಭೆ ನಡವಳಿಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:132 ಅತ್ತಿಗುಪ್ಪೆ ವಾರ್ಡ್ ಸಮಿತಿ ಸಭೆಯು ದಿನಾಂಕ:17-04-2021ರಂದು ಬೆಳ್ಳಿಗೆ 10:30 ಗಂಟೆಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಗಾಳಿಆಂಜನೇಯ ದೇವಸ್ಥಾನ)ದಲ್ಲಿ ನಡೆದಿರುತ್ತದೆ ಸಭೆಯ ನಡವಳಿಗಳು ಈ ಕೆಳಕಂಡಂತೆ

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀ ಬಸವರಾಜ ವೈ. ಅಂಬಿಗೇರ | ನೋಡೆಲ್ ಅಧಿಕಾರಿ | ಸಹಾಯಕ ಕಾನೂನು ಅಧಿಕಾರಿ, ಕಾನೂನು ಕೋಶ | ಹಾಜರಾಗಿರುತ್ತಾರೆ. |
| 2 | ಶ್ರೀ ಕೃಷ್ಣಮೂರ್ತಿ | ಕಾರ್ಯದರ್ಶಿಗಳು | ಸಹಾಯಕ ಅಭಿಯಂತರರು ವಾರ್ಡ ನಂ.132 | ಹಾಜರಾಗಿರುತ್ತಾರೆ. |
| 3 | ಶ್ರೀ ಮಾರುತಿ ಪಿ. ಸೇಟ್ | ಸದಸ್ಯರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ ನಂ.132 | ಹಾಜರಾಗಿರುತ್ತಾರೆ. |
| 4 | ಶ್ರೀ ಹೆಚ್.ಮಂಜುನಾಥ್ | ಸದಸ್ಯರು | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.132 | ಹಾಜರಾಗಿರುತ್ತಾರೆ. |
| 5 | ಶ್ರೀ.ಎನ್.ಕೃಷ್ಣಮೂರ್ತಿ | ಸದಸ್ಯರು | ತೋಟಗಾರಿಕೆ | ಹಾಜರಾಗಿರುವುದಿಲ್ಲ. |
| 6 | ಶ್ರೀ.ಶಿವಕುಮಾರ್ | ಬೀದಿ ದೀಪಗಳ ನಿರ್ವಹಣೆ ಗುತ್ತಿಗೆದಾರರ | | ಹಾಜರಾಗಿರುವುದಿಲ್ಲ. |

17/4/2021

| | | | | |
|---|---|---|---|---|
| | | ಪ್ರತಿನಿಧಿ | | |
| 7 | ಶ್ರೀ.ಚಿದಾನಂದ.ಎಂ.ಬಿ | ಸದಸ್ಯರು | ಅರಣ್ಯ ಇಲಾಖೆ | ಹಾಜರಾಗಿರುವುದಿಲ್ಲ. |
| 8 | ಶ್ರೀ.ಜಗನಾಥ್ | ಸದಸ್ಯರು | ಕಿರಿಯ ಅಭಿಯಂತರರು (ಬೆಸ್ಕಾಂ) | ಹಾಜರಾಗಿರುವುದಿಲ್ಲ. |
| 9 | ಶ್ರೀ.ಹನುಮಂತಪ್ಪ.ಎಂ | ಸದಸ್ಯರು | ಪಶುಪಾಲನ ಇಲಾಖೆ | ಹಾಜರಾಗಿರುವುದಿಲ್ಲ. |
| 10. | ಶ್ರೀ.ಬಾಲರಾಜು | ಸದಸ್ಯರು | ಕಾಮಗಾರಿ ನಿರೀಕ್ಷಕರು | ಹಾಜರಾಗಿರುತ್ತಾರೆ. |
| 11. | ಶ್ರೀ.ಸಿ.ನಾರಾಯಣ | ಸದಸ್ಯರು | ಅಧ್ಯಕ್ಷರು ಚಂದ್ರಾಬಡಾವಣೆ ನಿವಾಸಿಗಳ ಸಂಘ | ಹಾಜರಾಗಿರುತ್ತಾರೆ. |
| 12. | ಶ್ರೀಮತಿ.ವಾಣಿ | ಸದಸ್ಯರು | ಮಹಿಳಾ ಪ್ರತಿನಿಧಿಗಳು | ಹಾಜರಾಗಿರುತ್ತಾರೆ. |
| 13. | ಶ್ರೀ.ಸಿ.ಹೆಚ್.ಪೈ | ಸದಸ್ಯರು | ಅಧ್ಯಕ್ಷಕರು ಸ್ಕೈ ಲೈನ್ ಅಪಾರ್ಟ್‌ಮೆಂಟ್ | ಹಾಜರಾಗಿರುವುದಿಲ್ಲ. |
| 14. | ಶ್ರೀ.ಕೃಷ್ಣಪ್ಪ | ಸದಸ್ಯರು | ಸಹಾಯಕ ಅಭಿಯಂತರರು (BWSSB) | ಹಾಜರಾಗಿರುವುದಿಲ್ಲ. |

ವಾರ್ಡ್ ಕಮಿಟಿ ಸಭೆಯನ್ನು ನಡೆಸುವ ಕುರಿತಾಗಿ ದಿನಾಂಕ:12-4-2021ರಂದು ಸಭೆಯ ಸೂಚನಾ ಪತ್ರವನ್ನು ವಾರ್ಡ್-132ಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಕಳುಹಿಸಿಕೊಡಲಾಗಿರುತ್ತದೆ. ಹಾಗೂ ವಾರ್ಡ್-132 ವಾಟ್ಸ್ ಆಫ್ ಗ್ರೂಪ್ ಗೆ ನೋಟಿಸನ್ನು ಹಾಕಲಾಗಿರುತ್ತದೆ. ಹಾಗೂ ಸಭೆಗೆ ಹಾಜರಾಗಲು ವಾರ್ಡ್-132 ಕ್ಕೆ ಸಂಬಂಧಿಪಟ್ಟ ಎಲ್ಲಾ ಅಧಿಕಾರಿ / ಸಿಬ್ಬಂಧಿಯನ್ನು ಕೋರಲಾಗಿರುತ್ತದೆ.

ಸಭೆಯ ಪ್ರಾರಂಭಿಕ ಹಂತದಲ್ಲಿ ವಾರ್ಡ ಸಮಿತಿಯ ಅಧ್ಯಕ್ಷರು ಹಾಗೂ ಸಹಾಯಕ ಕಾನೂನು ಅಧಿಕಾರಿ ರವರು ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಈ ಹಿಂದೆ ಸಭೆಯ ನಡವಳಿಯನ್ನು ದಾಖಲಿಸಿರುವಂತೆ ಸಭೆಯಲ್ಲಿ ಓದಲಾಯಿತು.

ಮೇಲೆ ಹಾಜರಿದ್ದ ಅಧಿಕಾರಿಗಳು ಮತ್ತು ಸಮೀತಿ ಸದಸ್ಯರು ವಾರ್ಡ್ ವ್ಯಾಪ್ತಿಯ ಜಲಮಂಡಳಿ, ಬೆಸ್ಕಾಂ, ಘನತ್ಯಾಜ್ಯ ವಿಲೆವಾರಿ, ಆರೋಗ್ಯ ಇಲಾಖೆ, ಕಂದಾಯ ಮತ್ತು ಕಾಮಗಾರಿಕೆ ಇಲಾಖೆಗಳಿಗೆ ಸಂಬಂಧಿಸಿದಂತೆ, ಪ್ರಸ್ತುತ ಇರುವ ಸಮಸ್ಯೆಗಳನ್ನು ಮತ್ತು ಅವುಗಳನ್ನು ಪರಿಹಾರ ಮಾಡುವ ಕುರಿತಂತೆ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

1. **ಕೋವಿಡ್-19**: ಸಭೆಯಲ್ಲಿ ಹಾಜರಿದ್ದ ಶ್ರೀ.ನಾರಾಯಣ ಅಧ್ಯಕ್ಷರು, ಚಂದ್ರಾಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ರವರು ವ್ಯಾಕ್ಸಿನ್ ಹಾಕುವ ಬಗ್ಗೆ ವಾರ್ಡ್‌ನಲ್ಲಿ ಮೈಕ್ ಮೂಲಕ ಪ್ರಚಾರ

13/4/2021

ಮಾಡಬೇಕೆಂದು ಕೋರಿಕೊಂಡಿರುತ್ತಾರೆ. ಹಾಗೂ ವ್ಯಾಕ್ಸಿನ್ ಹಾಕಲು ಗಣಪತಿ ದೇವಸ್ಥಾನದ ಜಾಗವನ್ನು ಬಿಟ್ಟುಕೊಡಲು ಸಿದ್ದರಿರುವುದನ್ನು ಹಾಗೂ ವ್ಯಾಕ್ಸಿನ್ ಹಾಕಲು ಮತ್ತು ಟೆಸ್ಟಿಂಗ್‌ಗಾಗಿ ಸದರಿ ಸ್ಥಳವನ್ನು ಉಪಯೋಗಿಸಲು ಸಭೆಗೆ ತಿಳಿಸಿರುತ್ತಾರೆ. ಸದರಿ ವಿಷಯದಲ್ಲಿ ಕ್ರಮವಹಿಸಲು ಆರೋಗ್ಯ ವೈದ್ಯಾಧಿಕಾರಿ(ವಿಜಯನಗರ) ರವರು ನಿಯಮಾನುಸಾರ ಕ್ರಮವಹಿಸಲು ಸಭೆಯು ನಿರ್ದೇಶಿಸಿದೆ.

2. **ಘನತ್ಯಾಜ್ಯ ನಿರ್ವಹಣೆ:** ಈ ಹಿಂದೆ 132 ವಾರ್ಡ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ.ಗಂಗಣ್ಣಯ್ಯ ರವರು ವರ್ಗಾವಣೆಯಾಗಿದ್ದು, ಸದರಿಯವರ ಜಾಗಕ್ಕೆ ಹೊಸದಾಗಿ ಶ್ರೀ.ಹೆಚ್.ಮಂಜುನಾಥ್ ರವರನ್ನು ಪ್ರಭಾರಿ ಕಾರ್ಯಗಳ ಮೇಲೆ ನೇಮಿಸಲಾಗಿರುವುದನ್ನು ಶ್ರೀ.ಹೆಚ್.ಮಂಜುನಾಥ್ ರವರು ಸಭೆಯ ಗಮನಕ್ಕೆ ತಿಳಿಸಿರುತ್ತಾರೆ. ಸದರಿ ರವರಿಗೆ ಮನೆಮನೆಗಳಿಂದ ಕಸ ಸಂಗ್ರಹಣೆ ಮಾಡಲು ಒಟ್ಟು ನಿಯೋಜಿಸಲಾಗಿರುವ ಪೌರಕಾರ್ಮಿಕರ ಸಂಖ್ಯೆಯನ್ನು ಮತ್ತು ಆಟೋ ಟಿಪ್ಪರ್‌ಗಳ ಕಾರ್ಯನಿರ್ವಹಿಸುವ ಸಂಖ್ಯೆಗಳನ್ನು ಕಾಲಕಾಲಕ್ಕೆ ವಾರ್ಡ್ ಮಟ್ಟದ ವಾಟ್ಸ್‌ಆಫ್ ಗ್ರೂಫ್‌ಗೆ ಹಾಕಲು ಈ ಹಿಂದಿನ ಸಭೆಯಲ್ಲಿ ತಿಳಿಸಿ ಸೂಚಿಸಲಾಗಿತ್ತು. ಆದರೆ ಕಿರಿಯ ಆರೋಗ್ಯ ಪರಿವೀಕ್ಷಕರು ಸದರಿ ಕಾರ್ಯವನ್ನು ಮಾಡಿರುವುದಿಲ್ಲ. ಆದ್ದರಿಂದ ವಾರ್ಡ್‌ನಲ್ಲಿ ದಿನಾಲು ಕೆಲಸಕ್ಕೆ ಹಾಜರಾಗುವ ಪೌರಕಾರ್ಮಿಕರ ಮತ್ತು ಟಿಪ್ಪರ್ ಸಂಖ್ಯೆಯನ್ನು ವಾಟ್ಸ್‌ಆಫ್ ಗ್ರೂಫ್‌ಗೆ ಹಾಕಲು ಸಭೆಯು ಸೂಚಿಸಿದೆ.

3. **ವಾರ್ಡ ಮಟ್ಟದ ಕಾಮಗಾರಿ:** 132 ವಾರ್ಡ್ ಕಛೇರಿಯ ಬೋರ್‌ವೆಲ್ ರಿಪೇರಿ ಮಾಡುವ ಕುರಿತಂತೆ ಹಾಗೂ ಶೌಚಾಲಯ ರಿಪೇರಿ ಮಾಡುವ ಬಗ್ಗೆ ಚರ್ಚಿಸಲಾಯಿತು. ಹಾಗೂ 132 ವಾರ್ಡ್‌ನಲ್ಲಿ ಪ್ರಸ್ತುತ ಯಾವುದೇ ಕಾರ್ಯಗಳು ನಡೆಯುತ್ತಿರುವುದಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ.

ರಿಪೇರಿ ವಿಷಯಕ್ಕೆ ಸಂಬಂಧಿಸಿದಂತೆ ಸಹಾಯಕ ಅಭಿಯಂತರರು 132 ರವರು ಸೂಕ್ತ ಕ್ರಮಕೈಗೊಳ್ಳಲು ಸಭೆ ಸೂಚಿಸಿದೆ.

ಶ್ರೀ.ಸಿ.ಹೆಚ್.ಪೈ ಅಧ್ಯಕ್ಷರು ಸ್ಕೈ ಲೈನ್ ಸಿಟಿ ಫೆಡರೇಷನ್ ಅಪಾರ್ಟ್‌ಮೆಂಟ್‌ನ ಮಾನ್ಯ ಶಾಸಕರಾದ ಶ್ರೀ.ಎಂ.ಕೃಷ್ಣಪ್ಪ ರವರಿಗೆ ದಿನಾಂಕ:09-4-2021 ರಂದು ಪತ್ರವನ್ನು ಸಲ್ಲಿಸಿ ರಾಜಕಾಲುವೆ ಬ್ಲಾಕ್ ಆಗಿರುವುದನ್ನು ತೆರವುಗೊಳಿಸಿ ರಿಪೇರಿ ಮಾಡಲು ಕೋರಿಕೊಂಡಿರುತ್ತಾರೆ. ಇದಲ್ಲದೇ ರಸ್ತೆಯಲ್ಲಿ ಹೋಗುವ ದಾರಿ ಹೋಕರು ಕಾಂಪೌಂಡ್ ಗೋಡೆಗೆ ಉಪದ್ರುವವನ್ನು ಉಂಟು ಮಾಡುತ್ತಾರೆಂದು ತಿಳಿಸುತ್ತಾ ಸೂಕ್ತ ಕ್ರಮಕೈಗೊಳ್ಳಲು ಕೋರಿರುತ್ತಾರೆ. ಶ್ರೀ.ನಾರಾಯಣ ಅಧ್ಯಕ್ಷರು, ಚಂದ್ರಾಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ರವರು ಗಣಪತಿ ದೇವಸ್ಥಾನದ 80 ಅಡಿ ರಸ್ತೆಯಲ್ಲಿರುವ ಗ್ಯಾರೇಜ್ ಹಿಂದುಗಡೆ ಮೋರಿ ರಿಪೇರಿ ಮಾಡಬೇಕೆಂದು ಕೋರಿಕೊಂಡಿರುತ್ತಾರೆ. ಇದಲ್ಲದೇ ಸದರಿ ಮೋರಿಯಲ್ಲಿರುವ ಘನ ತ್ಯಾಜ್ಯವನ್ನು ತೆರವುಗೊಳಿಸಲು ಕೋರಿಕೊಂಡಿರುತ್ತಾರೆ. ಈ ವಿಷಯದಲ್ಲಿ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-132 ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು(ಗಾಳಿ ಆಂಜನೇಯದೇವಸ್ಥಾನ )ರವರು ಕ್ರಮವಹಿಸಲು ಸಭೆಯು ಸೂಚಿಸಿದೆ.

4. **ಅರಣ್ಯ ವಿಭಾಗ:** ಈ ಹಿಂದೆ ನಡೆದ ಸಭೆಯಲ್ಲಿ ಹಾಜರಿದ್ದ ಸದಸ್ಯರಾದ ಶ್ರೀ ಸಿ.ಹೆಚ್.ಪೈ.ರವರು ವಿಲೇಜ್ ಹೈಪರ್ ದಿಂದ ಅಂತಿಮ ರಸ್ತೆ ರವರಿಗೂ ಬೆಳೆದ ಗಿಡಮರಗಳ ರೆಂಬೆಕೊಂಬೆಗಳನ್ನು ಕತ್ತರಿಸಲು ಕೋರಿಕೊಂಡಿರುತ್ತಾರೆ. ಕ್ರಮ ಅರಣ್ಯಾಧಿಕಾರಿಗಳು (ದಕ್ಷಿಣ)ರವರಿಗೆ ಕೋರಿದೆ.

17/04/2021

5. **ವಾರ್ಡನಲ್ಲಿರುವ ಫುಟ್‌ಪಾತ್**:ಗಳನ್ನು ಒತ್ತುವರಿ ಮಾಡಿದ್ದರೆ ತೆರವುಗೊಳಿಸಲು ಹಾಗೂ ರಸ್ತೆಗುಂಡಿಗಳನ್ನು ಮುಚ್ಚಲು ಮತ್ತು ಅನಧೀಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿ ಕ್ರಮಕೈಗೊಳ್ಳಲು ವಾರ್ಡ್ ಸಂಖ್ಯೆ:132ರ ಸಹಾಯಕ ಅಭಿಯಂತರರಿಗೆ ಸಭೆಯು ಸೂಚಿಸಲಾಯಿತು.

6. **ಬೀದಿ ದೀಪಗಳ ನಿರ್ವಹಣೆ:** ಈ ಹಿಂದೆ ನಡೆದ ಸಭೆಯಲ್ಲಿ ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಿಸಿದಂತೆ ಹಲವಾರು ಬಾರಿ ಗಣಪತಿ ಸರ್ಕಲ್, ದಿವಾರ್ ಹೋಟೆಲ್ ಹತ್ತಿರ ದೀಪವನ್ನು ಹಾಕಲು ಶ್ರೀ.ಸಿ.ನಾರಾಯಣ ರವರು ಕೋರಿಕೊಂಡಿರುತ್ತಾರೆ. ಈ ಹಿಂದಿನ ಸಭೆಯಲ್ಲಿ ಹಾಜರಿರುವ ಕಿರಿಯ ಅಭಿಯಂತರರು(ವಿದ್ಯುತ್)ರವರಿಗೆ ಈ ಕೂಡಲೇ ದುರಸ್ಥಿಗೊಂಡಿರುವ ಬೀದಿ ದೀಪಗಳನ್ನು ಸರಿಪಡಿಸುವುದು ಮತ್ತು ಅಗತ್ಯ ಸ್ಥಳಗಳಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಸೂಚಿಸಿದೆ. ಸದರಿ ಅಧಿಕಾರಿಯವರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ಸಭೆಯ ಗಮನಕ್ಕೆ ಸದಸ್ಯರು ಮತ್ತೊಮ್ಮೆ ತಂದಿರುತ್ತಾರೆ. ಆದ್ದರಿಂದ ದಕ್ಷಿಣ ವಲಯದ ಸಹಾಯಕ ಕಾರ್ಯಪಾಲಕ ಅಭಿಯಂತರರು(ವಿದ್ಯುತ್)ರವರು ಈ ಕೂಡಲೇ ಕ್ರಮವಹಿಸಲು ಮತ್ತೊಮ್ಮೆ ಕೋರಿದೆ. ಕ್ರಮ ಕೈಗೊಂಡ ವರದಿಯನ್ನು ಸಭೆಯ ಗಮನಕ್ಕೆ ತರಲು ಕೋರಿದೆ.

7. **ರಸ್ತೆಯ ಗುಂಡಿ:** ಮುಚ್ಚುವ ಬಗ್ಗೆ ಚರ್ಚಿಸಲಾಯಿತು. ರಸ್ತೆಯ ಗುಂಡಿಗಳನ್ನು ಕಾಲಕಾಲಕ್ಕೆ ಗುರುತಿಸಿ ಮುಚ್ಚಲು ಕ್ರಮಕೈಗೊಳ್ಳಲಾಗುತ್ತಿದೆಂದು ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.

8. **BWSSB:** ಸದರಿ ಇಲಾಖೆಯಿಂದ ನಿಯೋಜಿಸಿದ ಅಧಿಕಾರಿಯು ಅನಿವಾರ್ಯ ಕಾರಣಗಳಿಂದ ಹಾಜರಾಗಿರುವುದಿಲ್ಲ. ಮುಂದಿನ ಸಭೆಯಲ್ಲಿ ತಪ್ಪದೇ ಹಾಜರಾಗಲು ಕೋರಿದೆ. ಹಾಗೂ ಈ ಹಿಂದಿನ ವಾರ್ಡ್ ಕಮಿಟಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅನುಷ್ಠಾನಗೊಳಿಸಲು BWSSB ಇಲಾಖೆಗೆ ಸೂಚಿಸಿದೆ.

9. **ತೆರಿಗೆ:** ಈ ಹಿಂದಿನ ಸಭೆಯಲ್ಲಿ ಹಾಜರಿದ್ದ ಕಂದಾಯ ಪರಿವೀಕ್ಷಕರಿಗೆ ತೆರಿಗೆ ವಸೂಲಾತಿಯನ್ನು ಮಾಡಲು ಹಾಗೂ ಸುಸ್ತಿದಾರರಿಗೆ ನೋಟಿಸು ಜಾರಿ ಮಾಡಿ ವಸೂಲಾತಿ ಕ್ರಮಕೈಗೊಳ್ಳುವುದು ಹಾಗೂ ಕಂದಾಯ ವಸೂಲಾತಿ ಮಾಡುತ್ತಿರುವ ಬಗ್ಗೆ ವಿವರವನ್ನು ನೋಡೆಲ್ ಅಧಿಕಾರಿರವರಿಗೆ ವರದಿ ನೀಡಲು ಈ ಹಿಂದಿನ ಸಭೆಯಲ್ಲಿ ಸೂಚಿಸಲಾಗಿತ್ತು ಆದರೆ ಕಂದಾಯದ ವಿವರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಮುಂದಿನ ಸಭೆಗೆ ಕಂದಾಯ ಪರಿವೀಕ್ಷಕರು ವಾರ್ಡ್ ಮಟ್ಟದಲ್ಲಿ ಸಂಗ್ರಹವಾಗುವ ತೆರಿಗೆ ವಿವರವನ್ನು ಸಭೆಗೆ ಸಲ್ಲಿಸಲು ಸೂಚಿಸಿದೆ. ಕಳೆದ ಮೂರು ಸಭೆಗಳಿಂದ ತಹಲ್‌ವರೆಗೂ ಸಭೆಗೆ ಕಂದಾಯ ವಿಭಾಗದಿಂದ ಯಾವುದೇ ಸಿಬ್ಬಂಧಿ ಹಾಜರಾಗಿರುವುದಿಲ್ಲ.

10. **ತೋಟಗಾರಿಕೆ:** ಚಂದ್ರಾ ಲೇಔಟ್‌ನ ಪ್ರಸನ್ನ ಗಣಪತಿ ದೇವಸ್ಥಾನದ ಹಿಂದುಗಡೆ ಇರುವ ಪಾರ್ಕನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಲು ಸದಸ್ಯರಾದ ಶ್ರೀ.ಸಿ.ನಾರಾಯಣ ರವರು ಕೋರಿಕೊಂಡಿರುತ್ತಾರೆ.

13/7/2021

ಸದರಿ ವಿಷಯದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಯೋಜನೆ (ದಕ್ಷಿಣ) ರವರು ಹಾಗೂ ತೋಟಗಾರಿಕ ಅಧೀಕ್ಷಕರು (ದಕ್ಷಿಣ)ರವರು ಕ್ರಮವಹಿಸಲು ಕೋರಿದೆ.

11. **ಟ್ರಾಫೀಕ್**: ಚಂದ್ರಾ ಬಡಾವಣೆಯ 80 ಅಡಿ ರಸ್ತೆಯಲ್ಲಿರುವ ವಿನಾಯಕ ಆಸ್ಪತ್ರೆ ಮುಂದುಗಡೆ ಮಾತ್ರ ಅಂದರೆ ಒಂದು ಕಡೆ ಮಾತ್ರ ವಾಹನಗಳನ್ನು ನಿಲ್ಲಿಸಲು ಪಾರ್ಕಿಂಗ್ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಒಂದು ವಾರ ರಸ್ತೆಯ ಒಂದು ಬದಿ ಇನ್ನೊಂದು ವಾರ ರಸ್ತೆಯ ಇನ್ನೊಂದು ಬದಿಯಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಬೇಕೆಂದು ಶ್ರೀ.ಸಿ.ನಾರಾಯಣ ರವರು ಸಭೆಗೆ ಮತ್ತೊಮ್ಮೆ ಕೋರಿಕೊಂಡಿರುತ್ತಾರೆ. ಸದರಿ ವಿಷಯದಲ್ಲಿ ಬ್ಯಾಟರಾಯಣಪುರ ಸಂಚಾರಿ ಪೊಲೀಸ್ ಠಾಣೆಯವರು ಕ್ರಮವಹಿಸಲು ಕೋರಿದೆ. ಬ್ಯಾಟರಾಯಣ ಪುರದ ಸಂಚಾರಿ ಪೊಲೀಸ್ ಠಾಣೆಯಿಂದ ಕಳೆದ ಸಭೆಗಳಿಗೆ ಯಾವುದೇ ಪೊಲೀಸ್ ಸಿಬ್ಬಂಧಿ ಹಾಜರಾಗಿರುವುದಿಲ್ಲ.

12. **ಪಶುಪಾಲನ ವಿಭಾಗ:** ಸಭೆಯಲ್ಲಿ ಹಾಜರಿದ್ದ ಶ್ರೀ.ನಾರಾಯಣ ಅಧ್ಯಕ್ಷರು, ಚಂದ್ರಾಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ರವರು ಬೀದಿ ನಾಯಿಗಳ ಹಾವಳಿಗಳನ್ನು ನಿಯಂತ್ರಿಸಲು ಕ್ರಮಕೈಗೊಳ್ಳಬೇಕೆಂದು ಹಾಗೂ ಬೀದಿ ನಾಯಿಗಳನ್ನು ಬೆಂಗಳೂರಿನಿಂದ ಆಚೆ ತೆಗೆದುಕೊಂಡು ಹೋಗಿ ಬೈಲು ಜಾಗದಲ್ಲಿ ಬಿಡುವುದು ಸೂಕ್ತವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಹೇಗೆ ಗೋ ಶಾಲೆಗಳನ್ನು ಸ್ಥಾಪಿಸಲಾಗಿದೆಯೋ ಅದೇ ರೀತಿ ಬೀದಿ ನಾಯಿಗಳ ನಿಯಂತ್ರಣಕ್ಕಾಗಿ ನಾಯಿಗಳ ಶಾಲೆಯನ್ನು ತೆರಯಬೇಕೆಂದು ಕೋರಿಕೊಂಡಿರುತ್ತಾರೆ. ಕ್ರಮ: ಜಂಟಿ ನಿರ್ದೇಶಕರು ಪಶುಪಾಲನ ವಿಭಾಗ ರವರು ವಿಷಯವನ್ನು ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲು ಕೋರಿದೆ.

ಸಭೆಯ ವಾರ್ಡ ಸಮಿತಿಯ ಅಧ್ಯಕ್ಷರು ವಾರ್ಡ ಮಟ್ಟದ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿಗಳ ನಡುವೆ ಸಮನ್ವಯ ಸಾಧಿಸಲು ವಾಟ್ಸ್ ಅಪ್ ಗ್ರೂಪ್‌ನ್ನು ಮಾಡಲಾಗಿದ್ದು, ಕಾಲಕಾಲಕ್ಕೆ ಆಯಾ ಸಂಬಂಧಪಟ್ಟ ಇಲಾಖೆ ಸಿಬ್ಬಂದಿ ಮತ್ತು ಅಧಿಕಾರಿಗಳ ಮಾಹಿತಿಯನ್ನು ಹಂಚಿಕೆ ಮಾಡಿಕೊಂಡು ಸಾರ್ವಜನಿಕ ಕುಂದುಕೊರತೆಗಳನ್ನು ಬಗೆಹರಿಸಿಕೊಂಡು ಕ್ರಮವಹಿಸಬೇಕೆಂದು ತಿಳಿಸಿರುತ್ತಾರೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರೆತಗಳನ್ನು ಆಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮತೆಗೆದುಕೊಂಡು ಆಯಾ ಸಂಬಂಧಪಟ್ಟ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದ್ದರು. ಕಾರ್ಯದರ್ಶಿಗಳು ವಂದನಾರ್ಪಣೆ ಮಾಡಿ ಸಭೆಯನ್ನು ಮುಕ್ತಾಯಗೊಳಿಸಿದರು.

17/4/2021

**ಕಾರ್ಯದರ್ಶಿಗಳು**
ವಾರ್ಡ ಸಂಖ್ಯೆ,132, ಅತ್ತಿಗುಪ್ಪೆ

**ನೋಡೆಲ್ ಅಧಿಕಾರಿ**
ವಾರ್ಡ ಸಂಖ್ಯೆ,132, ಅತ್ತಿಗುಪ್ಪೆ